21. ಹರಿಹರ ಸಬ್ ತಾಲ್ಲೂಕು ಜಾಲನಕೆರೆ ಕೆಳಭಾಗದಲ್ಲಿ ಹರಿಯುವ ಕಾಲವೆಯನ್ನು ತಿರಿಗಿಸುವದಕ್ಕೆ ಖರ್ಚಾಗುವ ಮೊಬಲಗು 907 ರೂಪಾಯಿಗಳ ಬಾಬತು ಅಂದಾಜಾವನ್ನು ಮಂಜೂರ್ಮಾಡಿ ಮತ್ತು ಸದರಿ ಕಾಮಗಾರಿ D. P. W. ಇಲಾಖೆ ಮೂಲಕ ನಡಿಸಬೇಕೆಂಬ ವಿಷಯದಲ್ಲಿ ತಲ್ಪಿದ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

22. ದಾವಣಗೆರೆ ಮುನಾಫರುಖಾನೆ ಕೇವಲ ಹೀನಸ್ಥಿತಿಯಲ್ಲಿರುತ್ತೆ. ಅದರ ರಿಪೇರಿ ಬಗ್ಗೆ ಪ್ರತಿವರ್ಷದಲ್ಲಿಯೂ 300 ರೂಪಾಯಿಗಳು ತಗಲುತ್ತಾ ಇದೆ. ಅದ್ದರಿಂದ ಅದಕ್ಕೆ ಬದಲಾಗಿ ಬ್ಯಾರೆ ಹೊಸಕಟ್ಟಡವನ್ನು ಕಟ್ಟಸುವುದು ಉತ್ತಮವೆಂಬ ವಿಷಯದಲ್ಲಿ ತಲುಪಿದ ಚಿತ್ರದುರ್ಗ ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಪಾಕೆಟ್ ಓದಲಾಯಿತು.

ಸದರಿ ಕಟ್ಟಡವು ಬಹಳ ಹಳೇದಾದದ್ದು ಇದಕ್ಕೆ ಪ್ರತಿ ವರ್ಷದಲ್ಲಿಯೂ 300 ರೂಪಾಯಿಗಳ ವರಿಗೂ ರಿಪೇರಿ ಲಾಗವಡು ತಗಲುತ್ತೆಂತ ರಿಪೋರ್ಟಿನಿಂದ ತಿಳಿಯಬರುತ್ತೆ. ದಾವಣಗೆರೆ ಸಬ್ ಡಿವೀಜ್ಞ ಆಫಿಸರವರು ಈಗ ಹಾಲಿ ಇರತಕ್ಕ ಕಟ್ಟಡವನ್ನು ಹರಾಜು ಮಾಡಿಸಿ ಅದಕ್ಕೆ ಬದಲಾಗಿ ಬ್ಯಾರೆ ಕಟ್ಟಡವನ್ನು ನಮ್ಮೂನೆ ನೇರೆ ಅನುಕೂಲವಾದ ಸ್ಥಳದಲ್ಲಿ ಕಟ್ಟಸಬೇಕಾಗಿ ಅಭಿಪ್ರಾಯಪಡುವದನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ್ ಇಂಜನೀಯರ್ ಸಾಹೇಬರವರು ಕೂಡ ಅದಕ್ಕೆ ಅನುವೋದಿಸಿರುತ್ತಾರೆ. ಸದರಿ ಕಟ್ಟಡ ಹರಾಜಾದರೆ ಸುಮಾರು 3,000 ರೂಪಾಯಿಗಳ ಮೇಲ್ಪಟ್ಟು ಹುಟ್ಟಬಹುದು. ಮೊದಲನೆ ತರಗತಿಯ ಮುನಾಫರುಖಾನೆಯನ್ನು ಕಟ್ಟಸುವದಕ್ಕೆ 4,000 ರೂಪಾಯಿಗಳು ಬೇಕಾಗುತ್ತೆ. ದಾವಣಗೆರೆ ಸಬ್ ಡಿವೀಜ್ಞ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರು ಮಾಡಿದ ಪ್ರೊಪೋಜಲನ್ನು ಬೋರ್ಡಿನವರು ಅಂಗೀಕಾರ ಮಾಡಿ ಹೊಸ ಮುನಾಫರ್‌ಖಾನೆಯನ್ನು ಕಟ್ಟಸಬೇಕಾಗಿ ತೀರ್ಮಾನಿಸಲಾಯಿತು.

23. ಜಗಲೂರು, ಹೊಸದುರ್ಗ, ಬಿದರಕೆರೆ, ತಳಕು, ರಾಂಪುರ, ಹಾನಗಲ್, ಈ ಸ್ಥಳಗಳಲ್ಲಿರತಕ್ಕ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೋಗಳ ಉಪಯೋಗಕ್ಕೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುವದಕ್ಕೆ ಬೋರ್ಡು ಪ್ರೆಸಿಡೆಂಟರವರು 1907ನೆ ಇಸವಿ ಮೇ ಮಾಹೆಯಲ್ಲಿ ಮಂಜೂರ್ಮಾಡಿದ ಹಣವನ್ನು ತೋರಿಸತಕ್ಕ ಸ್ಟೇಟ್‌ಮೆಂಟನ್ನು ಓದಲಾಯಿತು.

ಸದರಿ ಲೀಸ್ಟನ್ನು ಅಪ್ರೂವ್ ಮಾಡಿದೆ.

ಎಂ. ಚಂಗ್ಟೆಯ್ಯಶೆಟ್ಟಿ,
ಪ್ರೆಸಿಡೆಂಟ್.

ಮದ್ದಗಿರಿ ಡಿವಿಜ್ಞ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ಆಫೀಸ್.

ನೋಟಿಫಿಕೇಷನ್, ತಾರೀಖು 6ನೆ ನವೆಂಬರ್ 1907.

ಮದ್ದಗಿರಿಯಲ್ಲಿರುವ ಆರ್ಯಬಾಲಿಕಾ ಪಾಠಶಾಲೆ ಆಡಳಿತವನ್ನು ಗೌರ್ಮೆಂಟಿಗೆ ಒಪ್ಪಿಸಿರುವದ್ದರಿಂದ ಈ ಕಟ್ಟಡವನ್ನು ಮತ್ತು ಚಂದಾ ಮೊಬಲಗು ಪೈಕಿ ಪುಳಿದ 600 ರೂಪಾಯಿಗಳನ್ನು ಸರ್ಕಾರಕ್ಕೆ ಒಪ್ಪಿಸುವ ವಿಷಯದಲ್ಲಿ ಈ ಕಟ್ಟಡ ತಯಾರ್ಗೋಸ್ಕರ ಚಂದಾ ಕೊಟ್ಟ ದೊಡ್ಡಮನುಷ್ಯರ ಅಭಿಪ್ರಾಯವನ್ನು ತಿಳಿಯಲು 1907ನೆ ಇಸವಿ ಡಿಸೆಂಬರ್ 6ನೆ ತಾರೀಖು ಶುಕ್ರವಾರ ಬೆಳಿಗ್ಗೆ 7 ಘಂಟೆಗೆ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಮಿಟಿಂಗ್ ನಡಿಸಲ್ಪಡುವದ್ದರಿಂದ ಸದರಿ ಮಿಟಿಂಗಿಗೆ ಚಂದಾದಾರರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರಲ್ಪಟ್ಟಿದೆ.

ಮಿಟಿಂಗ್‌ನಲ್ಲಿ ತೀರ್ಮಾನವಾಗುವ ರೆಸೂಲ್ಯೂಷನಂತೆ ಜಾರಿಯಲ್ಲಿ ತರುವಬಗ್ಗೆ ಗೌರ್ಮೆಂಟಿಗೆ ಬರಿಸಲ್ಪಡುತ್ತೆ.

ಬಿ. ವೆಂಕಟರಾವ್,
ಅಸಿಸ್ಟೆಂಟ್ ಕಮ್ಮಿಷನರ್.

ನೋಟಿಸ್.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ :— ಕೊಪ್ಪ ತಾಲ್ಲೂಕು ಬೆಳುವನಕೊಡಿಗೆ ಗ್ರಾಮದ ಸರ್ವೆ ನಂ. 149-151ನೆ ತರಿ ಜಮೀನುಗಳನ್ನು ಸರಕಾರದ ಕಂದಾಯ ಬಾಕೀಗಾಗಿ ನಡದ ಹರಾಜಿನಲ್ಲಿ ಪಡದಿದ್ದ ಕೃಷ್ಣರಾಯರಿಂದ ನಾನು ಖರೀದಿಗೆ ಪಡಬೆಕೊಂಡಿದ್ದೇನೆ. ಇದು ತಿಳಿಯದೆ ಸದರಿ ಜಮೀನುಗಳನ್ನ ವೆಸ್ಸರ್ಸ್ ಆರ್‌ಬತ್‌ನಾಟ್ ಕಂಪನಿಯವರ ಇನ್‌ವಾಲ್ವೆಸಿ ವಿಷಯವಾಗಿ ಕ್ರಯವಾಗುವ ಜಮೀನುಗಳ ಜೊತೇಲಿ ಯಾರಾದರೂ ಕೊಂಡುಕೊಂಡು ವೋಸಹೋಗಬಾರದೆಂದು ಈ ಮೂಲಕ ಎಚ್ಚರಿಸುತ್ತೇನೆ.

ಭೂವನಕೋಟೆ ಕೇಶವ ಉಪಾಧ್ಯನ ರುಜುವು.